केन्द्रीय माध्यमिक शिक्षा बोर्ड
Central Board of Secondary Education
संबद्धता - School Affiliation Re-engineered Automation System (SARAS) 3.0
(Session : 2023-24) (For Class 9th & 11th)

# Details OF SCHOOL AFFILIATED TO

Central Board of Secondary Education

| Details Of The School Filled up AFFILIATION/OASIS | |
|---|---|
| **Name of Institution** | SAINIKETAN CENTRAL SCHOOL |
| **Affiliation Number** | 830731 |
| **State** | KARNATAKA |
| **District** | BAGALKOT |
| **Postal Address** | Sitrameshwara Nagar, Ward No 5 |
| **Pin Code** | 587313 |
| **Website** | www.sainiketan.in |
| **Year of Foundation** | 2011 |
| **Date of First Opening of School** | 6/1/2011 12:00:00 AM |
| **Name of Principal/ Head of Institution** | SANDEEP SOMSOLE |
| **Gender** | |
| **Principal's Educational/Professional Qualifications:** | M.A, B.Ed |
| **No of Experience (in Years):** | |
| **Administrative:** | 5 |
| **Teaching:** | 16 |
| **Status of The School** | Secondary Level |
| **Affiliation Period** | **From :** 01/04/2020 **To :** 31/03/2025 |
| **Name of Trust/ Society/ Managing Committee** | SHRI SHIRADI SAI SHIKSHANA SAMSTHE |

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಾರ್ಯಾಲಯ ಬಾಗಲಕೋಟ

ನಂ-ಜಿ1/6923/ಶ್ರೀಶಿಸಾಶಿಸಂ/ಹೊಖಾಪ್ರಾಶಾ/ಪ್ರಾರಂಭ-ಅನುಮತಿ-/92/10-11 (5377) ದಿನಾಂಕ: 7 -03-2011

ಜ್ಞಾಪನ ಪತ್ರ

ಶ್ರೀ ಶಿರಡಿ ಸಾಯಿ ಶಿಕ್ಷಣ ಸಂಸ್ಥೆ ಮುಧೋಳ ತಾ: ಮುಧೋಳ ಇವರ ಗವರ್ನಿಂಗ ಕೌನ್ಸಿಲನ್ನು ಕರ್ನಾಟಕ ಶಿಕ್ಷಣ ಕಾಯ್ದೆ **1983 (ಕರ್ನಾಟಕ ಆಕ್ಟ 1-1995) ಸೆಕ್ಷನ್ 31** ರಂತೆ ಈ ದಿನ ದಿನಾಂಕ: 28-02-2011. ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ. ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | ಕ್ರಮ ಸಂಖ್ಯೆ | 57/2011-12 |
| 2 | ಪ್ರಾಥಮಿಕ ಶಾಲೆಯ ಹೆಸರು | ಸಾಯಿನೀಕೇತನ ಕಿರಿಯ ಪ್ರಾಥಮಿಕ ಶಾಲೆ ಮುಧೋಳ |
| 3 | ಅನುಮತಿ ನೀಡಿದ ತರಗತಿ | 2011-2012 ಸಾಲಿನಿಂದ 1ನೇ ತರಗತಿಯಿಂದ |
| 4 | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ |
| 5 | ಶುಲ್ಕ ಪಾವತಿ ಮಾಡಿರುವ ಮೊತ್ತ | ರೂ 5000-00 ಪಾವತಿ ಮಾಡಿರುತ್ತಾರೆ |
| 6 | ಶಾಲೆ ನಡೆಯುತ್ತಿರುವ ಸ್ಥಳ | ಸಿದ್ರಾಮೇಶ್ವರ ನಗರ ಮುಧೋಳ ತಾಲೂಕ ಮುಧೋಳ |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: **57/11-12** ಪುಟ ಸಂಖ್ಯೆ **17** ವ್ಯಾಲೂಂ ಸಂಖ್ಯೆ **01** ರಲ್ಲಿ ಈ ಕಚೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ . ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೋಳಪಟ್ಟು ನೀಡಲಾಗಿದೆ .

1. ಈ ನೋಂದಾವಣೆ ನಿಯಮ 3 (5) (4) ಕ್ಕೆ ಒಳಪಟ್ಟಿರುತ್ತದೆ.
2. ಗವರ್ನಿಂಗ್ ಕೌನ್ಸಿಲ್ ಇವರು ನಿಯಮ 4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳ,ಸಿಬ್ಬಂದಿ ವರ್ಗ ಆರ್ಥಿಕ ಅನುಕುಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯು ಯಾವೂದೇ ಸಂದರ್ಭದಲ್ಲಿಯೂ ಸರ್ಕಾರದ ಪುರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5. ಶಾಲೆಯನ್ನು ಮಂಜುರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನಿಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ ಸಂಖ್ಯೆ:1:95)ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು .
8. ಈ ಖಾಸಗಿ ಪ್ರಾಥಮಿಕ ಶಾಲೆ ನೊಂದಣಿಯಂತೆ ಸರ್ಕಾರಿ ಅಧೀಸೂಚನೆ ಸಂಖ್ಯೆ ಇಡಿ-175-ಪಿ-ಎಂ-ಸಿ-95- ದಿನಾಂಕ 07-09-1998 ಮತ್ತು ದಿನಾಂಕ 29-12-1998 ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ
9. ಆಡಳಿತ ಮಂಡಳಿಯು ಸರ್ಕಾರದಿಂದ ಯಾವದೇ ಅನುದಾನವನ್ನು ಭಯಸುವದಿಲ್ಲವೆಂದು ರೂ 20/-ರ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವದು.
10. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ( ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ,ಸೇವಾ ಷರತ್ತು ಮತ್ತು ನಿಬಂದನೆಗಳು) ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
11. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯ ಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಪಾಲಿಸಬೇಕು.
12. ಶಾಲೆ ಪ್ರಾರಂಭಿಸಿದ 2 ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆ ಸಂಬಂದಿಸಿದ ಪ್ರಸ್ಥಾವನೆ ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು
13. ಸರ್ಕಾರದ ಆದೇಶ ಸಂಖ್ಯೆ ಇಡಿ -28 ಪಿಜಿಸಿ 94- ದಿನಾಂಕ 29-04-1994 ರಂತೆ 1 ರಿಂದ5ನೇ ತರಗತಿಯಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃ ಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾನೀತಿ ಪಾಲಿಸುತ್ತಿರುವ ಶಾಲೆಗಳಿಗೆ 6 ನೇ ತರಗತಿಯಿಂದ ಕನ್ನಡ ಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿಅನುಮತಿ ಪಡೆದುಕೊಳ್ಳಬಹುದು.

14. ನೊಂದಾಯಸಲು ಅವಕಾಶವಿರುವದು ಭಾಷಾನೀತಿಗೆ ಒಳಪಟ್ಟು ನೊಂದಣಿಯಾಗಿರುವ ಶಾಲೆಗಳಲ್ಲೆ ಭಾಷಾ ನೀತಿಯನ್ನು ಉಲ್ಲಂಘಿಸಿರುವದು.ಸರ್ಕಾರದ / ಇಲಾಖೆಯ /ಕನ್ನಡ ಅಭಿವೃದ್ದಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ಅನುಮತಿ ಮತ್ತು ನೊಂದಣಿಯನ್ನು ರದ್ದು ಪಡಿಸಲಾಗುವದು ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ಧಾಖಲೆಗಳು ಸತ್ಯಕ್ಕೆ ದೂರವಾದದ್ದು ಎಂದು ಯಾವದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಈ ನೊಂದಣಿ ಪ್ರಸ್ಥಾವನೆಯನ್ನು ರದ್ದು ಪಡಿಸಲಾಗುವದು .
15. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಬದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟೀಖಾತೆಯಲ್ಲಿ ಇಡತಕ್ಕದ್ದು
16. ಅನುಮತಿನೀಡಿದ ಪ್ರತಿಯೊಂದುತರಗತಿಯಲ್ಲಿ ಮಕ್ಕಳಹಾಗೂಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ 50 ಹಾಗೂ ಹಾಜರಾತಿ 40ಇರತಕ್ಕದ್ದು.
17. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು .
18. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರಡಿಯಲ್ಲಿ ಉಪಭಂದ 36-39 ರಂತೆ ನೊಂದಾಯಿಸಿದ ಎಲ್ಲ ಶಾಲೆಗಳು ರಿಕಗ್ನೇಶನ್ ಹಾಗೂ ಪ್ರಾವಿಜನಲ್ ರಿಕಗ್ನೇಶನ್ ವ್ಯಾಪ್ತಿಗೆ ಬರುವದು .
19. ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಮಮಾನುಸಾರ ಮಾಡಿಸತಕ್ಕದ್ದು.
20. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ,ಪಾಠೋಪಕರಣ ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟದ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವದು .
21. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು
22. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ಧಾಖಲಾತಿಯನ್ನು ಶಾಲೆ ನೋಂದಣೆಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಚೇರಿಗೆ ತಿಳಿಸಬೇಕು ಒಂದು ವೇಳೆ ತೆರೆಯದಿದ್ದಲ್ಲಿ **ಯಾವದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಆ ಆದೇಶ ತಾನಾಗಿ ರದ್ದಾಗುವದು.**
23. **ಶಾಲೆಯಲ್ಲಿ ಹೆಣ್ಣು** ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯ ವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
24. ಪ್ರತಿ ವರ್ಷಕ್ಕೆ ಒಂದರಂತೆ ಒಂದೊಂದು ವರ್ಗವನ್ನು ಪ್ರಾರಂಭಿಸಬೇಕು.

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ ಬಾಗಲಕೋಟ

ಗೆ

ಕ್ಷೇತ್ರ ಶಿಕ್ಷಣಾಧಿಕಾರಿಗಳು,
ಮುಧೋಳ

ಪ್ರತಿಯನ್ನು ಮಾಹಿತಿಗಾಗಿ

1. ಅಧ್ಯಕ್ಷರು /ಕಾರ್ಯದರ್ಶಿಗಳು ಶ್ರೀಶಿರಡಿ ಸಾಯಿ ಶಿಕ್ಷಣ ಸಂಸ್ಥೆ ಮುಧೋಳ ತಾ: ಮುಧೋಳ
2. ಮುಖ್ಯ ಗುರುಗಳು ಸಾಯಿನೀಕೇತನ ಕಿರಿಯ ಪ್ರಾಥಮಿಕ ಶಾಲೆ ಮುಧೋಳ